# ಧೀರೆ ಓಬವ್ವ ನಾಗತಿ

## ತರಾಸು ಅವರ 'ದುರ್ಗಾಸ್ತಮಾನ' ಕಾದಂಬರಿಯ 'ಗಂಡೋಬವ್ವ'ನ ನೆನಪುಗಳು



**ಭಾರತಿ ಹಾದಿಗೆ**

ಕಲೆ: ಬಸವರಾಜ ಎಸ್‌. ಕಲೆಗಾರ

'ಚಿತ್ರದುರ್ಗದ ಜನರಿಗೆ ಚಿತ್ರದುರ್ಗ ಎಂದರೆ ಒಂದು ಊರಲ್ಲ, ಕೋಟೆಯಲ್ಲ, ಬೆಟ್ಟವಲ್ಲ, ತಮ್ಮ ಕರುಳಿಗೆ ಹೊಂದಿಕೊಂಡು ಬೆಳೆದ ಜೀವಂತ ವಸ್ತು. ಮದಕರಿ ನಾಯಕ ಎಂದರೂ ಅಷ್ಟೇ, ಇತಿಹಾಸದಲ್ಲಿ ಇದ್ದು ಹೋದ ಒಬ್ಬ ಅರಸನಲ್ಲ, ತಮ್ಮ ಜೀವಂತ ಆಪ್ತನೋಟ.' ಇದು ತರಾಸು ಅವರ ಕರುಳಿನ–ಹೃದಯದ ಮಾತು. ಚಿತ್ರದುರ್ಗದ ನೆಲದ ಮಗನಾಗಿ ಅವರು ಹೇಳಿರುವ ಈ ಮಾತು ಸತ್ಯ. ಆದರೆ, ಅವರ ಕಾದಂಬರಿ 'ದುರ್ಗಾಸ್ತಮಾನ'ದಲ್ಲಿ ಬರುವ ಮದಕರಿ ನಾಯಕನ ಸಾಕುತಾಯಿ, ಹಿರಿಯ ಮದಕರಿ ನಾಯಕರ ಪತ್ನಿ, ಕಸ್ತೂರಿ ರಂಗಪ್ಪ ನಾಯಕರ ತಾಯಿ, ಆನೆಗುಂದಿ ನಾಯಕರ ಮಗಳು 'ಓಬವ್ವ ನಾಗತಿ' ಪಾತ್ರದ ಗುಂಗು ನನ್ನನ್ನು ಬಹಳಷ್ಟು ಕಾಡಿದೆ.

'ದುರ್ಗಾಸ್ತಮಾನ' ಹತ್ತು ಪಾಯಿಂಟ್‌ಗಳ ಚಿಕ್ಕ ಅಕ್ಷರಗಳಲ್ಲಿ ಒತ್ತಾಗಿ ಮುದ್ರಿತವಾದ ಏಳು ನೂರು ಪುಟಗಳ ಐತಿಹಾಸಿಕ ಕಾದಂಬರಿ. ತರಾಸು ಅವರ ಕಡೆಯ ಕಾದಂಬರಿ. ಕಾದಂಬರಿಯ ಆರಂಭದಲ್ಲಿ ಓಬವ್ವ ನಾಗತಿಯ ಊಳಿಗದಾಕೆ ಕಂಚಿನ ಕುಟ್ಟಣಿಗೆಯನ್ನು ಎದುರುಗಿಟ್ಟುಕೊಂಡು ವೀಳ್ಯದೆಲೆಯ ನಾರನ್ನು ಬೆರಳುಗುರಿನಿಂದ ತೆಗೆಯುತ್ತಿದ್ದ ಹೊನ್ನವ್ವಳ ಕಣ್ಣು, ದಂತದ ಕುಸುರಿ ಕೆಲಸ ಮಾಡಿದ ಶ್ರೀಗಂಧದ ಮರದ ಮಂಚದ ಒಂದು ಪಾರ್ಶ್ವದಲ್ಲಿ ದಿಂಬಿಗೆ ಮೈಯಾನಿಸಿ ಕುಳಿತ ಓಬವ್ವ ನಾಗತಿಯನ್ನು ನೋಡುತ್ತಿತ್ತು. 'ಅವ್ವ ಹೇಗಿದ್ದರು, ಈಗ ಹೇಗಾಗಿ ಹೋಗಿದ್ದಾರೆ!' ಎಂಬ ಯೋಚನೆ ಆಕೆಯ ಮನದಲ್ಲಿ ಸುಳಿಯುವುದು ಮತ್ತೆ ಹಳೆಯದನ್ನು ನೆನೆಯುವುದರೊಂದಿಗೆ ಕಾದಂಬರಿ ಆರಂಭವಾಗುತ್ತದೆ.

ಅಲ್ಲಿಯತನಕ ಚಿತ್ರದುರ್ಗ ಎಂದರೆ ಮದಕರಿ ನಾಯಕ, ಚಿತ್ರದುರ್ಗ ಎಂದರೆ ಒನಕೆ ಓಬವ್ವ ಎಂದುಕೊಂಡಿದ್ದ ನನಗೆ 'ಓಬವ್ವ ನಾಗತಿ' ಎಂಬ ಹೆಸರು ಕೇಳಿದಾಗ ರೋಮಾಂಚನವೆನಿಸಿತು. ಓದುತ್ತಾ ಓದುತ್ತಾ ನೆತ್ತರ ಕಾವನ್ನು ಹೆಚ್ಚಿಸುವಂತೆ ಮೈ ನವಿರೇಳತೊಡಗಿತು.

ನನಗೆ ಓಬವ್ವ ನಾಗತಿ, ಮಾನವೀಯತೆಯ ಸರ್ವಶ್ರೇಷ್ಠತೆಯನ್ನು ಎತ್ತಿ ಸಾರುವವರಂತೆ ಕಂಡರು. ಲಿಂಗ ಶ್ರೇಷ್ಠತೆಯ ವ್ಯಸನಕ್ಕೆ ಬಲಿಯಾಗಲಿಲ್ಲ, ಗಂಡು ಮಕ್ಕಳಿಗಿಂತ ಒಂದು ಮಟ್ಟ ಹೆಚ್ಚಿನ ವಿದ್ಯಾಭ್ಯಾಸ, ಕುದುರೆ ಸವಾರಿ, ಆನೆ ಸವಾರಿ,